GOVERNMENT OF KARNATAKA

# STUDY OF DEFICIENCIES OF TRAINING INFRASTRUCTURE IN THE STATE FOR TRAINING IN VOCATIONAL TRADES

MANPOWER AND EMPLOYMENT DIVISION

PLANNING DEPARTMENT

BANGALORE

JUNE, 1986

# F O R E W O R D

As desired by the Department of Employment and Training in September 1982 to undertake a detailed study on the deficiency of Training Infrastructure in the State for Training in vocational trades vis-a-vis Integrated Rural Development for enlarging the scope for vocational training in the State, Manpower and Employment Division of the Planning Department, took up this study.

This study has brought out the need for streamlining the availability of equipments, replacements as well as new purchases based on the Intake capacity, number of machines and prescriptions of standards and norms for replacement of machinery. It also highlights the need to have adequate delegation of powers to the Principals for undertaking small repairs and replacements and provision of additional funds. The need for establishment of a Maintenance Squad for maintenance of machinery and arranging for the repairs, provision of adequate buildings and hostel facilities to Industrial Training Institutes are some of the major findings of this report. I hope the findings of this study would lead to steps in the direction of improving the quality of training in Industrial Training Institutes.

We are thankful to the Principals of various Industrial Training Institutes and the Directorate of Employment and Training for having provided necessary information in the preparation of this report. I am thankful to Dr.M.A.Srinivas, Director, Manpower and Employment Division of the Planning Department and his colleagues for their Co-operation in completing this study quickly.

Bangalore,

Date:14-4-1986.

D.M.NANJUNDAPPA
Commissioner and Secretary to Govt.,
Department of Institutional Finance
and Statistics and Planning Department.

# PREFACE

Craftsman Training is an important area of building up of Technical Manpower needed for the development of the Society. In this, the availability of a sound infrastructure in the Training Institutes goes a long way in improving the quality of training imparted to the students.

This report undertaken at the instance of the Directorate of Employment and Training, highlights some of the deficiencies in the facilities available in the State and makes some recommendations for their improvement.

In the preparation of this report, Sri.M.Sathyanarayana, Joint Director, Sri.K.Firoze Ahmed, Deputy Director and Sri.S. Chandrashekaran, Assistant Statistical Officer, have rendered assistance.

Bangalore,

Date:14-4-1986.

M.A.SREENIVAS,
Director,
Manpower and Employment Division,
Planning Department.

## C O N T E N T S

FOREWORD

PREFACE

1. INTRODUCTION 1

2. AVAILABILITY OF EQUIPMENTS

3. REQUIREMENTS OF MACHINES AND EQUIPMENTS

4. MAINTENANCE AND REPAIRS FACILITIES

5. ALLOCATION OF FUNDS FOR PURCHASE OF NEW EQUIPMENTS AND REPAIRS

6. TEACHING AND TRAINING STAFF

7. BUILDING FACILITIES

8. LIBRARY FACILITIES

9. EXTRA CURRICULAR ACTIVITIES

10. HOSTEL FACILITIES

RECOMMENDATIONS

NOTE ON ACTION TAKEN OR PROPOSED TO BE TAKEN ON THE RECOMMENDATIONS OF THE REPORT 7

ANNEXURES

## ಕರ್ನಾಟಕದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಲಭ್ಯವಿರುವ ತರಬೇತಿಗೆ ಬೇಕಾದ ಮೂಲಭೂತ ಸೌಲಭ್ಯಗಳ ಕೊರತೆ ಅಧ್ಯಯನದಿಂದ ಹೊರಬಿದ್ದ ಕೆಲವು ಮುಖ್ಯ

### —: ಅಂಶಗಳು : —

ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸಧ್ಯದಲ್ಲಿ ಇರತಕ್ಕ ತರಬೇತಿಗೆ ಬೇಕಾದ ಸೌಲಭ್ಯಗಳ ಕೊರತೆಗಳನ್ನು ಗುರುತಿಸಲು ಜನಶಕ್ತಿ ಮತ್ತು ಉದ್ಯೋಗ ವಿಭಾಗವು ಒಂದು ಅಧ್ಯಯನವನ್ನು ಕೈಗೆತ್ತಿಕೊಂಡಿತ್ತು.

1) ಉಪಕರಣಗಳ ಲಭ್ಯತೆ :— (ಅ) ತರಬೇತಿಗೆ ಬೇಕಾದ ಯಂತ್ರಗಳು ಮತ್ತು ಇತರೆ ಉಪಕರಣಗಳನ್ನು ಸರಬರಾಜು ಮಾಡುವಲ್ಲಿ ಅನುಸರಿಸಬೇಕಾದ ಸೂಚನೆಗಳನ್ನು ( Norms ) ಅನುಸರಿಸದೇ ಇರುವುದು, (ಬ) ಅನುಸರಿಸಬೇಕಾದ ಸೂಚನೆಗಳನ್ನು ನಿಗದಿಪಡಿಸದೇ ಇರುವುದು, ಇವು ಹೆಚ್ಚಾಗಿ ಪ್ಯಾಟರ್ನ್ ಮೇಕರ್, ಕಟ್ಟಿಂಗ್ ಮತ್ತು ಟೇಲರಿಂಗ್, ಶೀಟ್ ಮೆಟಲ್ ಕಟರ್, ವೈರಮನ್, ಎಲೆಕ್ಟ್ರೋಪ್ಲೇಟರ್, ಇನಸ್ಟ್ರುಮೆಂಟ್ಸ್ ಮೆಕ್ಯಾನಿಕ್, ಮತ್ತು ಡ್ರಾಫ್ಟ್ಸ್‌ಮನ್ ವೃತ್ತಿಗಳಲ್ಲಿ ಕಂಡು ಬಂದಿದೆ- (ಕ) ಸರಬರಾಜಿನಲ್ಲಿ ಒಂದು ಸುವ್ಯವಸ್ಥೆ ಇಲ್ಲದೆ ಇರುವುದು, (ಡ) ಕೆಲವು ಉಪಕರಣಗಳನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸರಬರಾಜು ಮಾಡದೇ ಇರುವುದು (ಇ) ಸುಮಾರು ಯಂತ್ರಗಳ ಮತ್ತು ಉಪಕರಣಗಳ ದುರಸ್ತಿ ಮಾಡಬೇಕಾದ ಪರಿಸ್ಥಿತಿ ಇರುವುದು. ದುರಸ್ತಿಗಾಗಿ ನಿಂತಿರುವ ಉಪಕರಣಗಳಲ್ಲಿ ಡ್ರಾಫ್ಟ್ಸ್‌ಮನ್, ಮೆಕ್ಯಾನಿಕ್; ಟರ್ನರ್, ಇಲೆಕ್ಟ್ರೀಷಿಯನ್, ಮೆಕ್ಯಾನಿಕ್ ಜನರಲ್; ಮಷಿನಿಷ್ಟ ತರಬೇತಿಗಳಲ್ಲಿ ಹೆಚ್ಚಾಗಿರುತ್ತದೆ. ಮತ್ತು (ಈ) ಕೆಲವು ಯಂತ್ರಗಳು ತಾಂತ್ರಿಕ ಬದಲಾವಣೆಗಳಿಂದ ನಿರುಪಯುಕ್ತತೆಯನ್ನು ಹೊಂದುವುದು. ಇವು ಹೆಚ್ಚಾಗಿ ಫಿಟ್ಟರ್, ಮತ್ತು ಮಷಿನಿಷ್ಟ ವೃತ್ತಿಗಳಲ್ಲಿ ಕಂಡು ಬರುತ್ತದೆ.

2) ಉಪಕರಣಗಳು ಮತ್ತು ಯಂತ್ರಗಳ ಬೇಡಿಕೆ :— ಹೆಚ್ಚುವರಿ ಬೇಡಿಕೆಯು ಉಪಕರಣಗಳು ಮತ್ತು ಯಂತ್ರಗಳಿಗೆ ಮುಖ್ಯವಾಗಿ ಈ ಕೆಳಕಂಡ ಕಾರಣಗಳಿಗಾಗಿ ಇರುತ್ತವೆ. (ಅ) ಹಾಲಿ ಲಭ್ಯವಿರತಕ್ಕ ಉಪಕರಣಗಳು ಮತ್ತು ಯಂತ್ರಗಳು ಸಾಲದೆ ಇರುವುದು. (ಬ) ಯಂತ್ರ ಕೆಡುವುದು, (ಕ) ತಾಂತ್ರಿಕ ಬದಲಾವಣೆಗಳು, (ಡ) ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆ, (ಇ) ಬೇಡಿಕೆಗಿಂತ ಕಡಿಮೆ ಸರಬರಾಜು. ಉಪಕರಣಗಳು ಮತ್ತು ಯಂತ್ರಗಳು ಡ್ರಾಫ್ಟ್ಸ್‌ಮನ್, ಮೆಕ್ಯಾನಿಕ್, ಮಷಿನಿಷ್ಟ, ರೆಫ್ರಿಜರೇಟರ್ ಮತ್ತು ಏರಕಂಡೀಷನಿಂಗ್, ಇಲೆಕ್ಟ್ರೀಷಿಯನ್, ಮೋಟಾರ್ ವೆಹಿಕಲ್ ತರಬೇತಿ ವೃತ್ತಿಗಳಲ್ಲಿ ಕಡಿಮೆ ಸರಬರಾಜು ಆಗಿದ್ದಾಗಿ ಕಂಡುಬರುತ್ತದೆ. ಯಂತ್ರಗಳು ಮತ್ತು ಉಪಕರಣಗಳು ಕೆಲಸ ಮಾಡದೇ ಇರುವುದಕ್ಕೆ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಅಭಾವ, ಸ್ಥಳಾವಕಾಶದ ಕೊರತೆ, ಬಿಡಿ ಭಾಗಗಳ ಸರಬರಾಜು ಇಲ್ಲದೆ ಇರುವುದು ಮತ್ತು ಬಿಡಿ ಭಾಗಗಳು ಲಭ್ಯವಿಲ್ಲದೆ ಇರುವುದು ಕಾರಣಗಳಾಗಿರುತ್ತವೆ.

3) ಉಪಕರಣಗಳ ಮತ್ತು ಯಂತ್ರಗಳ ದುರಸ್ತಿ ಮತ್ತು ಮೇಲುಸ್ತುವಾರಿಗಾಗಿ ಲಭ್ಯವಿರುವ ಸೌಲಭ್ಯಗಳು :—

13 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದುರಸ್ತಿ ಮಾಡಲು ವರ್ಕ್‌ಶಾಪ್ ಇರಲಿಲ್ಲ. 13 ಸಂಸ್ಥೆಗಳಲ್ಲಿ ದುರಸ್ತಿ ಮತ್ತು ಮೇಲುಸ್ತುವಾರಿಗಾಗಿ ಬೇಕಾಗುವ ತರಬೇತಿ ಸೌಲಭ್ಯಗಳು ಇರಲಿಲ್ಲ. ದುರಸ್ತಿಗಾಗಿ ಪ್ರತ್ಯೇಕ ಸಿಬ್ಬಂದಿ ಇದ್ದ ಕಡೆಯಲ್ಲಿ ಈ ಸಿಬ್ಬಂದಿಯು ದುರಸ್ತಿ

ಮತ್ತು ಮೇಲುಸ್ತುವಾರಿ ಕೆಲಸದಲ್ಲಿ ಮಗ್ನರಾಗಿರಲಿಲ್ಲ. ಕೆಲವು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದುರಸ್ತಿ ಮತ್ತು ಮೇಲುಸ್ತುವಾರಿ ಸಿಬ್ಬಂದಿಯ ಕೊರತೆ ಇತ್ತು ಎಂದು ತಿಳಿದುಬಂದಿದೆ. ಮೆಕಾನಿಕಲ್ ಓವರಹಾಲಿಂಗ್ ಭಾಗಗಳನ್ನು ಇಟ್ಟುಕೊಳ್ಳುವುದು, ಸಣ್ಣ ದುರಸ್ತಿ ಕೆಲಸಗಳನ್ನು ಈ ಸಿಬ್ಬಂದಿಯು ನೋಡಿಕೊಳ್ಳುತ್ತಿರುತ್ತಾರೆ. 2 ಸಂಸ್ಥೆಗಳಲ್ಲಿ ಯಂತ್ರಗಳ ದುರಸ್ತಿ ಕೆಲವು ತಿಂಗಳಿಗೊಮ್ಮೆ ಮಾಡಬೇಕಾಗಿತ್ತು. ಯಂತ್ರಗಳ ಮೇಲುಸ್ತುವಾರಿ ಮತ್ತು ದುರಸ್ತಿ ಕೆಲಸ ಪ್ರತ್ಯೇಕ ಸಿಬ್ಬಂದಿ ಇಲ್ಲದ ಸಂಸ್ಥೆಗಳಲ್ಲಿ ಬೋಧಕ ಸಿಬ್ಬಂದಿಯು ಗಮನಿಸುತ್ತಾರೆಂದು ತಿಳಿದು ಬಂದಿದೆ. ಈ ಸಿಬ್ಬಂದಿಯು ಯಂತ್ರಗಳ ದುರಸ್ತಿ ಮತ್ತು ಮೇಲುಸ್ತುವಾರಿ ಕೆಲಸದಲ್ಲಿ ಸಂಪೂರ್ಣವಾಗಿ ತರಬೇತಿ ಹೊಂದಿಲ್ಲ. ಹಾಗೂ ಸರಾಸರಿ ದಿನಕ್ಕೆ ಒಂದು ಗಂಟೆ ಈ ಕೆಲಸದಲ್ಲಿ ತೊಡಗಿದ್ದರು.

4) ಯಂತ್ರಗಳ ದುರಸ್ತಿ ಮತ್ತು ಖರೀದಿಗೆ ವಿನಿಯೋಗಿಸಿದ ಹಣ :-

ಹೊಸ ಉಪಕರಣಗಳ ಮತ್ತು ಯಂತ್ರಗಳ ಖರೀದಿಗಾಗಿ ಸರ್ಕಾರಿ ತರಬೇತಿ ಸಂಸ್ಥೆಗಳು ಒಟ್ಟಾರೆ ಖರ್ಚಿನಲ್ಲಿ 1982-83ರಲ್ಲಿ ಶೇಕಡ 1 ಕ್ಕಿಂತ ಕಡಿಮೆ ಖರ್ಚು ಮಾಡಿವೆ. ಯಂತ್ರಗಳ ದುರಸ್ತಿಗಾಗಿ ಶೇಕಡಾ 0.5ಕ್ಕಿಂತ ಕಡಿಮೆ ಖರ್ಚು ಮಾಡಲಾಗಿದೆ. ಒಟ್ಟಾರೆ ಹೆಚ್ಚು ಖರ್ಚು ನೌಕರವರ್ಗದ ಸಂಬಳಕ್ಕೆ ಆಗಿದೆ. ಮಂಜೂರಾತಿಯನ್ನು ತೆಗೆದುಕೊಳ್ಳುವಲ್ಲಿ ವಿಳಂಬ, ಹಣದ ಕೊರತೆ, ಮತ್ತು ಬಿಡಿ ಭಾಗಗಳು ಲಭ್ಯವಿಲ್ಲದೆ ಇರುವುದು ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿನ ಮುಖ್ಯ ತೊಂದರೆಗಳು.

5) ಬೋಧಕ ಮತ್ತು ತರಬೇತಿ ಸಿಬ್ಬಂದಿ ವರ್ಗ :-

371 ಮಂಜೂರಾದ ಬೋಧಕ ಮತ್ತು ತರಬೇತಿ ಸಿಬ್ಬಂದಿ ಹುದ್ದೆಗಳಿದ್ದವು. ಅವುಗಳಲ್ಲಿ 337ನ್ನು ತುಂಬಲಾಗಿದೆ. ಎಲೆಕ್ಟ್ರೀಷಿಯನ್, ಮಷಿನಿಷ್ಟ, ಪಿಟ್ಟರ್, ಟರ್ನರ್ ಹಾಗೂ ಗಣಿತ ಬೋಧಕರುಗಳಲ್ಲಿ ಕೆಲ ಹುದ್ದೆಗಳನ್ನು ತುಂಬಿರಲಿಲ್ಲ. ಹಾಗೆಯೇ ಇನಸ್ಟ್ರಕ್ಟರ್ ಹುದ್ದೆಯಲ್ಲಿ ಕ್ಯಾಲಕುಲೇಷನ್ ವಿಜ್ಞಾನ, ಇಂಜನೀಯರಿಂಗ್ ಮತ್ತು ಡ್ರಾಯಿಂಗನಲ್ಲಿ ಹುದ್ದೆಗಳು ಖಾಲಿ ಇದ್ದವು. ಕೆಲವಷ್ಟು ಇನಸ್ಟ್ರಕ್ಟರಗಳು ಬೇಸಿಕ್ ತರಬೇತಿ ಹೊಂದಬೇಕಿತ್ತು. ಇದಲ್ಲದೆ, ಅನೇಕ ಬೋಧಕರು ರಿಫ್ರೆಷಿಂಗ್ ತರಬೇತಿಯನ್ನು ಹೊಂದಿರಲಿಲ್ಲ.

6) ಕಟ್ಟಡ ಸೌಕರ್ಯ :- 19 ಸಂಸ್ಥೆಗಳಲ್ಲಿ 14ಕ್ಕೆ ಸ್ವಂತ ಕಟ್ಟಡ ಇತ್ತು. 5 ಸಂಸ್ಥೆಗಳು ಬಾಡಿಗೆ ಕಟ್ಟಡದಲ್ಲಿದ್ದವು. 7 ಸಂಸ್ಥೆಗಳಿಗೆ ಹೆಚ್ಚುವರಿ ಕಟ್ಟಡದ ಸೌಕರ್ಯ ಬೇಕಿತ್ತು.

7) ಗ್ರಂಥಾಲಯ ಸೌಲಭ್ಯಗಳು :- 17 ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸುಸಜ್ಜಿತ ಗ್ರಂಥಾಲಯ ಸೌಕರ್ಯ ಇತ್ತು.

8) ಬೋಧಕೇತರ ಚಟುವಟಿಕೆಗಳು :—

17 ಸಂಸ್ಥೆಗಳಲ್ಲಿ ಒಳಾಂಗಣ ಕ್ರೀಡಾಂಗಣ ಸೌಕರ್ಯ ಇತ್ತು. 17 ಸಂಸ್ಥೆಗಳಲ್ಲಿ ಆಟದ ಮೈದಾನ ಇತ್ತು. ಆಟಕ್ಕೆ ಬೇಕಾದ ಉಪಕರಣಗಳು ಮತ್ತು ಹಣ 17 ಸಂಸ್ಥೆಗಳಲ್ಲಿ ಲಭ್ಯವಿದ್ದುವು. 2 ಸಂಸ್ಥೆಗಳಲ್ಲಿ ಸಂಸ್ಥೆಯ ಅಧಿಕಾರಿಗಳು ಕ್ರೀಡಾ ಚಟುವಟಿಕೆಯನ್ನು ಸಹ ನೋಡಿಕೊಳ್ಳುತ್ತಿದ್ದರು.

9) ವಿದ್ಯಾರ್ಥಿ ವಸತಿ ಗೃಹದ ಸೌಕರ್ಯ :—

3 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸ್ವಂತ ವಸತಿ ಗೃಹದ ಸೌಕರ್ಯವಿತ್ತು. ಒಂದು ಸಂಸ್ಥೆಯಲ್ಲಿ ಖಾಸಗಿ ವಸತಿ ಸೌಕರ್ಯವಿತ್ತು.

10) ಅಧ್ಯಯನದ ಶಿಫಾರಸ್ಸುಗಳು :—

ಮೇಲ್ಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವು ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದೆ.

1) ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಲಭ್ಯವಿರತಕ್ಕ ಉಪಕರಣಗಳು ಮತ್ತು ಯಂತ್ರಗಳ ಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕು. ಈ ಸಮಿತಿಯು ಸಂಸ್ಥೆಗಳ ಒಟ್ಟಾರೆ ಇಂಟೇಕ್, ಹಳೆಯ ಯಂತ್ರ ಮತ್ತು ಉಪಕರಣಗಳನ್ನು ಕೈ ಬಿಟ್ಟು ಹೊಸದಾಗಿ ಖರೀದಿಸಬೇಕಾದ ಉಪಕರಣಗಳ ಮತ್ತು ಯಂತ್ರಗಳ ಸಂಖ್ಯೆ ಮತ್ತು ಹೊಸದಾಗಿ ಖರೀದಿಸಬೇಕಾದ ಉಪಕರಣಗಳು ಮತ್ತು ಯಂತ್ರಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ತನ್ನ ಶಿಫಾರಸ್ಸುಗಳನ್ನು ಮಾಡಬೇಕು.

2) ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರಿಗೆ ಹೆಚ್ಚಿನ ಅಧಿಕಾರವನ್ನು ವಿಕೇಂದ್ರೀಕರಿಸುವುದು.

3) ಹೊಸ ಯಂತ್ರಗಳ ಖರೀದಿ ಮತ್ತು ದುರಸ್ತಿಗಾಗಿ ಇಲಾಖೆಗೆ ಒಟ್ಟಾರೆ ಆಯವ್ಯಯದಲ್ಲಿ ಶೇಕಡಾ 20ರಷ್ಟು ಗೊತ್ತುಪಡಿಸಬೇಕು.

4) ಉಪಕರಣ ಮತ್ತು ಯಂತ್ರಗಳ ಖರೀದಿಗಾಗಿ ಕೇಂದ್ರೀಕೃತ ಖರೀದಿ ಕ್ರಮವನ್ನು ಅನುಸರಿಸುವುದು.

5) ಯಂತ್ರಗಳ ಮೇಲುಸ್ತುವಾರಿ, ದುರಸ್ತಿ ಮತ್ತು ಅವುಗಳನ್ನು ನೋಡಿಕೊಳ್ಳಲು ಒಂದು ವಿಶೇಷ ಸ್ಕ್ವಾಡ್ ರಚಿಸಬೇಕು. ಈ ಸ್ಕ್ವಾಡ್ ಹಾಲಿ ಲಭ್ಯವಿರತಕ್ಕ ಜನಶಕ್ತಿಯನ್ನು ಬಳಸಿಕೊಳ್ಳಬೇಕು. ಈ ಸ್ಕ್ವಾಡ್ ವಿವಿಧ ಕೈಗಾರಿಕಾ ಸಂಸ್ಥೆಗಳಿಗೆ ಭೇಟಿ ಕೊಟ್ಟು (ಕೋರಿಕೆ ಮೇರೆಗೆ ) ಯಂತ್ರಗಳ ದುರಸ್ತಿ ಕೆಲಸವನ್ನು ನೋಡಿಕೊಳ್ಳತಕ್ಕದ್ದು.

6) ಕೈಗಾರಿಕಾ ತರಬೇತಿ ಸಂಸ್ಥೆಗಳ ಕಟ್ಟಡಗಳನ್ನು ಕಟ್ಟಲು ವಿಶೇಷ ಕಾರ್ಯಕ್ರಮ ಕೈಗೆತ್ತಿಕೊಳ್ಳಬೇಕು.

7) ವಿದ್ಯಾರ್ಥಿ ವಸತಿ ನಿಲಯಗಳನ್ನು ಕೈಗಾರಿಕಾ ತರಬೇತಿ ಸಂಸ್ಥೆಯು ಹೊಂದಲು ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

## 11) ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಕ್ರಮ :—

ಈ ವರದಿಯ ಶಿಫಾರಸ್ಸುಗಳನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಂಡ ಕ್ರಮಗಳು :—

1) ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಇರತಕ್ಕ ಯಂತ್ರ ಮತ್ತು ಉಪಕರಣಗಳ ಪರಿಸ್ಥಿತಿಯನ್ನು ಪರಿಶೀಲಿಸಲು ಹಾಗೂ ಸೂಕ್ತ ಶಿಫಾರಸ್ಸು ಮಾಡಲು ತಜ್ಞರ ಸಮಿತಿಯನ್ನು ನೇಮಿಸಲಾಗಿದೆ.

2) ಪ್ರಾಂಶುಪಾಲರಿಗೆ ಸೂಕ್ತ ಅಧಿಕಾರವನ್ನು ವಿಕೇಂದ್ರೀಕರಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

3) ಹೊಸ ಯಂತ್ರಗಳ ಮತ್ತು ಉಪಕರಣಗಳ ಖರೀದಿಯಲ್ಲಿ ಮತ್ತು ದುರಸ್ತಿಗಾಗಿ ಹೆಚ್ಚುವರಿ ಹಣವನ್ನು ಕೊಡಲು ನಿರ್ಧರಿಸಲಾಗಿದೆ.

4) ಕೇಂದ್ರೀಕೃತ ಖರೀದಿಯ ವ್ಯವಸ್ಥೆಯನ್ನು ಒಟ್ಟಾರೆ ಅನುಷ್ಠಾನಕ್ಕೆ ತರಲಾಗಿದೆ.

5) ಯಂತ್ರಗಳ ದುರಸ್ತಿ ಮತ್ತು ಮೇಲುಸ್ತುವಾರಿಗಾಗಿ ಒಂದು ವಿಶೇಷ ಸ್ಕ್ವಾಡ್ ರಚಿಸಲು ಕ್ರಮವನ್ನು ರೂಪಿಸಲಾಗುತ್ತಿದೆ.

6) ಕೈಗಾರಿಕಾ ತರಬೇತಿ ಸಂಸ್ಥೆಗೆ ಕಟ್ಟಡ ಕಟ್ಟಲು ಸೂಕ್ತ ವ್ಯವಸ್ಥೆಯನ್ನು ಮಾಡಲು ಯೋಜನೆಯೊಂದನ್ನು ರೂಪಿಸಲಾಗುತ್ತಿದೆ.